

# ಡೀಪ್‌ಫೇಕ್ ಹಾಗೆಂದರೇನು?

**ಡೀಪ್‌ಫೇಕ್ ತಂತ್ರಜ್ಞಾನದ ಬಗ್ಗೆ ವ್ಯಾಪಕ ಟೀಕೆ ವ್ಯಕ್ತವಾಗುತ್ತಿದ್ದು, ಈ ತಂತ್ರಜ್ಞಾನದಿಂದ ರೂಪುಗೊಂಡ ವಿಡಿಯೊ ಹಾಗೂ ಚಿತ್ರಗಳ ಬಗ್ಗೆಯೂ ಎಲ್ಲೆಡೆ ಆಕ್ರೋಶ ವ್ಯಕ್ತವಾಗುತ್ತಿದೆ. ಅಷ್ಟಕ್ಕೂ ಏನಿದು ಡೀಪ್‌ಫೇಕ್?**

■ **ಶಶಿಕುಮಾರ್ ಸಿ.**

ನಟಿ ರಶ್ಮಿಕಾ ಮಂದಣ್ಣ ಅವರ ಡೀಪ್‌ಫೇಕ್ ವಿಡಿಯೊ ಹಾಗೂ ನಟಿ ಕತ್ರಿನಾ ಕೈಫ್ ಅವರ ಡೀಪ್‌ಫೇಕ್ ಚಿತ್ರದ ಬಗ್ಗೆ ದೇಶದೆಲ್ಲೆಡೆ ವ್ಯಾಪಕ ಟೀಕೆ ವ್ಯಕ್ತವಾಗುತ್ತಿದ್ದು, ಈ ವಿಡಿಯೊ ಹಾಗೂ ಚಿತ್ರದ ಹಿಂದಿರುವ ಕಾಣದ ಕೈಗಳನ್ನು ಹುಡುಕುವ ಕಾರ್ಯಕ್ಕೂ ಕೇಂದ್ರ ಸರ್ಕಾರ ಈಗಾಗಲೇ ಕೈಹಾಕಿದೆ.

ರಶ್ಮಿಕಾ, ಕತ್ರಿನಾ ಅವರ ತಿರುಚಿದ ವಿಡಿಯೊ ಹಾಗೂ ಚಿತ್ರವು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ದುರ್ಬಳಕೆಗೆ ಸ್ಪಷ್ಟ ನಿದರ್ಶನ. ಹಲವು ದೇಶಗಳಲ್ಲಿ ಸಾಮಾಜಿಕ ಪಿಡುಗಿನಂತೆ ತಲೆಎತ್ತಿರುವ ಡೀಪ್‌ಫೇಕ್ ಸದ್ಯ ದೇಶಕ್ಕೂ ಕಾಲಿಟ್ಟಿದ್ದು, ನಟಿಯರನ್ನು ಗುರಿಯಾಗಿಸುವ ಮೂಲಕ ಈ ತಂತ್ರಜ್ಞಾನ ದುರ್ಬಳಕೆಗೆ ಅಡಿಯಿಟ್ಟಿದೆ.

## ಏನಿದು ಡೀಪ್‌ಫೇಕ್?

ಈಗಾಗಲೇ ಸೃಷ್ಟಿಸಿದ ವಿಡಿಯೊಗೆ ಬೇರೊಬ್ಬರ ಮುಖಭಾವ ಮತ್ತು ಧ್ವನಿಯನ್ನು ಸಂಯೋಜಿಸುವ ತಂತ್ರಜ್ಞಾನದ ಪ್ರಕ್ರಿಯೆಗೆ ಡೀಪ್‌ಫೇಕ್ ಎನ್ನಲಾಗುತ್ತದೆ. ಈ ತಂತ್ರಜ್ಞಾನ ಬಳಸಿಕೊಂಡು ರಚಿಸಿದ ವಿಡಿಯೊ ಹಾಗೂ ಚಿತ್ರಕ್ಕೆ ಡೀಪ್‌ಫೇಕ್ ವಿಡಿಯೊ ಎಂದು ಕರೆಯಲಾಗುತ್ತದೆ.

ಈ ತಂತ್ರಜ್ಞಾನವನ್ನು 21ನೇ ಶತಮಾನದ ಫೋಟೊಶಾಪ್‌ನ ‘ಉತ್ತರಾಧಿಕಾರಿ’ ಅಂತಲೂ ಕರೆಯಲಾಗುತ್ತದೆ. ಮುಂಚೆಲ್ಲ ಫೋಟೊಶಾಪ್‌ನ ಸಹಾಯದಿಂದ ಯಾರದ್ದೋ ದೇಹಕ್ಕೆ ಮತ್ಯಾರದ್ದೋ ತಲೆಯನ್ನು ಎಡಿಟಿಂಗ್ ಟೂಲ್‌ಗಳ ಮೂಲಕ ಜೋಡಿಸಿ ತಿರುಚಲಾಗುತ್ತಿತ್ತು. ಈ ಪ್ರಕ್ರಿಯೆಯು ಮುಂಚೆಲ್ಲಾ ಗಂಟೆಗಟ್ಟಲೆ, ವಾರಗಟ್ಟಲೆ ನಡೆಯುತ್ತಿತ್ತು. ವ್ಯಕ್ತಿ ನೇರವಾಗಿ ಈ ಕಾರ್ಯದಲ್ಲಿ ಪಾಲ್ಗೊಳ್ಳಬೇಕಿತ್ತು.

ಡೀಪ್‌ಫೇಕ್ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತವಾಗಿ ಕಾರ್ಯನಿರ್ವಹಿಸುವುದರಿಂದ ಟೆಕ್ಸ್ಟ್ ಕಮಾಂಡ್ ನೀಡಿದರೆ ಸಾಕು, ಈಗಾಗಲೇ ಚಿತ್ರಿಸಿರುವ ವಿಡಿಯೊಗೆ ಮತ್ತೊಬ್ಬರ ಮುಖಚಹರೆಯನ್ನು ಜೋಡಿಸಿ ಕ್ಷಣಾರ್ಧದಲ್ಲಿ ವಿಡಿಯೊ ಸಿದ್ಧವಾಗಿಸಿ ನಿಮ್ಮ ಮುಂದಿಡುತ್ತದೆ.

### ನಿರ್ಮಾತೃ ಯಾರು?

ಡೀಪ್‌ಟ್ರೇಸ್ ಎಂಬ ಸಂಸ್ಥೆ ಡೀಪ್‌ಫೇಕ್ ತಂತ್ರಜ್ಞಾನದ ರೂವಾರಿ. 2019ರಲ್ಲಿ 15,000 ಡೀಪ್‌ಫೇಕ್ ವಿಡಿಯೊಗಳನ್ನು ಆನ್‌ಲೈನ್ ಮೂಲಕ ಈ ಸಂಸ್ಥೆ ತಯಾರಿಸಿತ್ತು. ಈ ಸಂಖ್ಯೆ ಕೇವಲ ಒಂಬತ್ತು ತಿಂಗಳುಗಳಲ್ಲಿ ದ್ವಿಗುಣಗೊಂಡಿತ್ತು. ಅಂದರೆ ಇದರ ವ್ಯಾಪಕ ಬಳಕೆ ದಿನೇದಿನೇ ಹೆಚ್ಚಾಗುತ್ತಿದೆ ಅನ್ನುವುದು ಸ್ಪಷ್ಟವಾಗುತ್ತದೆ.

ಕಾಲ್ಪನಿಕ ಫೋಟೊಗಳನ್ನು ರಚಿಸಲು ಬಳಸುತ್ತಿದ್ದ ಡೀಪ್‌ಫೇಕ್ ತಂತ್ರಜ್ಞಾನವನ್ನು ಕ್ರಮೇಣ ವಿಡಿಯೊಗಳ ರಚನೆಗೆ ಬಳಸಲಾಗುತ್ತಿದೆ.

## ಯಾರೆಲ್ಲ ಬಳಸುತ್ತಾರೆ?

ಡೀಪ್‌ಫೇಕ್ ತಂತ್ರಜ್ಞಾನವನ್ನು ಶೈಕ್ಷಣಿಕ ಮತ್ತು ಕೈಗಾರಿಕಾ ಸಂಶೋಧಕರು, ಹವ್ಯಾಸಿ ಉತ್ಸಾಹಿಗಳು, ದೃಶ್ಯ ಪರಿಣಾಮಗಳ ಸ್ಟುಡಿಯೊಗಳು (ವಿಡಿಯೊ ಗ್ರಾಫಿಕ್ಸ್) ಕ್ರಿಯಾಶೀಲ ವಿಡಿಯೊಗಳನ್ನು ರಚಿಸಲು ಬಳಸುತ್ತಾರೆ. ಇದರಂತೆ ಸದ್ಬಳಕೆಯಾಗಬೇಕಿದ್ದ ಈ ತಂತ್ರಜ್ಞಾನವನ್ನು ಪೋರ್ನ್ ಅಥವಾ ಅಶ್ಲೀಲ ಚಿತ್ರ ತಯಾರಕರು ಅಶ್ಲೀಲ ವಿಡಿಯೊಗಳನ್ನು ರೂಪಿಸಲು ಹೆಚ್ಚಾಗಿ ಬಳಸುತ್ತಿರುವುದು ಆತಂಕಕಾರಿ ವಿಷಯ.

ಚುನಾವಣೆಗಳ ಸಂದರ್ಭದಲ್ಲಿ ರಾಜಕಾರಣಿಗಳ ತೇಜೋವಧೆ ಮಾಡುವ ಸಲುವಾಗಿಯೂ ಈ ತಂತ್ರಜ್ಞಾನವನ್ನು ದುರ್ಬಳಕೆ ಮಾಡಲಾಗುತ್ತಿದೆ. ಇದಕ್ಕೆ ಸ್ಪಷ್ಟ ಉದಾಹರಣೆಯೆಂದರೆ, ಬರಾಕ್ ಒಬಾಮ ಹಾಗೂ ಡೊನಾಲ್ಡ್ ಟ್ರಂಪ್ ನಡುವೆ ನಡೆದ ಅಮೆರಿಕ ಅಧ್ಯಕ್ಷರ ಚುನಾವಣೆ. ಆಗ ಅಲ್ಲಿ ಡೀಪ್‌ಫೇಕ್ ವಿಡಿಯೊಗಳು ಸಾಕಷ್ಟು ಸದ್ದು ಮಾಡಿದ್ದವು.

## ನೈಜತೆಗೆ ನಕಲಿ ಸವಾಲ್

ಕೃತಕ ಬುದ್ಧಿಮತ್ತೆಯ ಸಹಾಯದಿಂದ ಯಾರದ್ದೋ ದೇಹಕ್ಕೆ ಯಾರದ್ದೋ ತಲೆಯನ್ನು ಫೋಟೊ ಎಡಿಟಿಂಗ್ ಟೂಲ್‌ಗಳ ಮೂಲಕ ಜೋಡಿಸಲಾಗುತ್ತದೆ. ಹೀಗೆ ಮಾಡಿದ ಚಿತ್ರಗಳನ್ನು ನೋಡಿದಾಕ್ಷಣ ಅದು ಎಡಿಟ್ ಮಾಡಿದ ಚಿತ್ರವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಆದರೆ ಈ ಡೀಪ್ ಫೇಕ್ ತಂತ್ರಜ್ಞಾನದಲ್ಲಿ ಯಾವುದೇ ಅನುಮಾನ ಬಾರದಂತೆ ವಿಡಿಯೊ ಹಾಗೂ ಫೋಟೊ ಸೃಷ್ಟಿಸುವ ಕಾರ್ಯವನ್ನು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಅತ್ಯಂತ ನಾಜೂಕಿನಿಂದ ಮಾಡುತ್ತದೆ. ■